ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-1

**(ದಿನಾಂಕ 10.12.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಂದುವರಿದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-**

ಸೌಭಾಗ್ಯಮ್ಮ ಮತ್ತು ಚನ್ನವೀರಮ್ಮರವರ ತಂದೆಯ ವಾರಸುದಾರರು ಇನ್ನೂ ಜೀವಂತ ಇದ್ದಾರೆ ಎಂದರೆ ಸರಿ. 17.02.2006 ರ ಮೃತ್ಯೂ ಪತ್ರದ ಆಧಾರದ ಮೇಲೆ ನಾನು ಕಿರಿಯ ದಿವಾಣಿ ನ್ಯಾಯಾಲಯದಲ್ಲಿ ಒಂದು ದಾವಾ ಓ ಎಸ್ 75/2013 ಹೂಡಿದ್ದೆ ಎಂದರೆ ಸರಿ. 17.02.2006 ರ ಮೃತ್ಯೂ ಪತ್ರದ ಆಧಾರದ ಮೇಲೆ ನಾನು ಮಾಲೀಕಾ ಮತ್ತು ಸ್ವಾಧೀನ ದಾರ ಅಂತಾ ಘೋಷಣಾತ್ಮಕ ದಾವಾ ಹೂಡಿದ್ದೆ ಎಂದರೆ ಸರಿ. ಗುರುಬಸ್ಸಯ್ಯ ವಿರುದ್ದ ನಾನು ದಾವಾ ಹೂಡಿದ್ದು ಗುರುಬಸ್ಸಯ್ಯ ತೀರಿಕೊಂಡಿರುತ್ತಾರೆ. ಗುರುಬಸ್ಸಯ್ಯನ ವಾರಸುದಾರರು ಜೀವಂತ ಇದ್ದಾರೆ ಎಂದರೆ ಸರಿ. ಗುರುಬಸ್ಸಯ್ಯನ ಅಣ್ಣ ತಮ್ಮಂದಿರು ಜೀವಂತ ಇದ್ದಾರೆ. ಗುರುಬಸ್ಸಯ್ಯನ ಅಣ್ಣ ತಮ್ಮಂದಿರನ್ನು ದಾವಾದಲ್ಲಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಅದರ ಅವಶ್ಯಕತೆ ಇರಲಿಲ್ಲ. ಸದರಿ ದಾವಾ ವಜಾ ಆಗಿರುತ್ತದೆ. ಸದರಿ ದಾವಾ ಓ ಎಸ್ ನಂಬರ 75/2013 ವನ್ನು ಮುಂದುವರೆಸಲು ನಾನು ಇದುವರೆಗೆ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಾವಾ ವಜಾ ಆಗಿರುವ ಕಾರಣ ಈ ದಾವಾ ಹೂಡುವ ಅಧಿಕಾರ ನನಗೆ ಇಲ್ಲಾ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 1, 2, 4 ಸೌಭಾಗ್ಯಮ್ಮ ಪಾಲಿಗೆ ಬಂದಿದೆ ಎಂದರೆ ಸರಿ. ಸೌಭಾಗ್ಯಮ್ಮ ಮತ್ತು ಚನ್ನವೀರಮ್ಮ ರವರಿಗೆ ಮನಸಾ ಮನಸ್ಸು ಸರಿ ಇಲ್ಲದ ಕಾರಣ ಅವರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮ ಯಾವಾಗಲೂ ಅವರ ಗಂಡ ನೊಂದಿಗೆ ವಾಸವಾಗಿದ್ದರು ಎಂದರೆ ನಮ್ಮ ಮನೆಯಲ್ಲಿ ವಾಸವಾಗಿದ್ದರು. ಗುರುಬಸ್ಸಯ್ಯ ಕ್ಯಾರೆಕಟ್ಟೆ, ಗುಡೇಕೋಟೆ, ಹಳ್ಳಿಕೇರಿ ಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿರುತ್ತಾರೆ.

ಅಜ್ಜಯ್ಯನನ್ನು ಗುರುಬಸ್ಸಯ್ಯ ಮತ್ತು ಸೌಭಾಗ್ಯ ತನ್ನ ಮಗನಂತೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಗುರುಬಸ್ಸಯ್ಯ ಮತ್ತು ಸೌಭಾಗ್ಯ ರವರೇ ಅಜ್ಜಯ್ಯ ರವರನ್ನು ಓದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಅಜ್ಜಯ್ಯ ಸಣ್ಣ ಮಗು ಆಗಿದ್ದಾಗಿನಿಂದಲೂ ಗುರುಬಸ್ಸಯ್ಯ ಮತ್ತು ಸೌಭಾಗ್ಯ ಅವರೇ ಶಾಲೆಗೆ ಸೇರಿಸಿ ಎಲ್ಲಾ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು ಎಂದರೆ ಅದು ಅವರಿಗೆ ಬಿಟ್ಟ ವಿಷಯ. ಹೀಗಾಗಿ ಅಜ್ಜಯ್ಯನ ಎಲ್ಲಾ ಶಾಲಾ ದಾಖಲಾತಿಗಳಲ್ಲಿ ತಂದೆ ತಾಯಿಯರ ಹೆಸರು ಗುರುಬಸ್ಸಯ್ಯ ಮತ್ತು ಸೌಭಾಗ್ಯ ಅಂತಾ ದಾಖಲಾಗಿದೆ ಎಂದರೆ ಇರಬಹುದು. ಗುರುಬಸ್ಸಯ್ಯ ಮತ್ತು ಸೌಭಾಗ್ಯ ರವರಿಗೆ ಅಜ್ಜಯ್ಯ ಮತ್ತು ಕೊಟ್ರಯ್ಯ ತಮ್ಮನ ಮಕ್ಕಳಾಗಬೇಕು. ಗುರುಬಸ್ಸಯ್ಯ ಮತ್ತು ಸೌಭಾಗ್ಯ ಎಲ್ಲಿ ಇದ್ದರೋ ಅಲ್ಲಿ ಅಜ್ಜಯ್ಯ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಐಟಂ ನಂಬರ 1, 2 ಮತ್ತು 4 ದಾವಾ ಆಸ್ತಿ ಯನ್ನು ಗುರುಬಸ್ಸಯ್ಯ ಅವರ ತಮ್ಮಂದಿರ ಮೂಲಕ ಸಾಗುವಳಿ ಮಾಡಿಸುತ್ತಿದ್ದರು ಎಂದರೆ ನಾವು ಮಾಡುತ್ತಿದ್ದೆವು ಎನ್ನುತ್ತಾರೆ. ಪಾಲು ವಿಭಾಗ ಆದ ನಂತರ ನಾನು ಎಂದಿಗೂ ದಾವಾ ಐಟಂ 1, 2 ಮತ್ತು 4 ಸಾಗುವಳಿ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಗುರುಬಸ್ಸಯ್ಯ ಮತ್ತು ಸೌಭಾಗ್ಯ ರವರ ಜಂಟಿ ಸ್ವಾಧೀನದಲ್ಲಿಯೇ ದಾವಾ ಆಸ್ತಿಗಳನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಸೌಭಾಗ್ಯಮ್ಮ 10.01.2010 ರಂದು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಗುರುಬಸ್ಸಯ್ಯ 08.02.2016 ರಂದು ಮೃತ ಪಟ್ಟಿರುತ್ತಾರೆ ಎಂದರೆ ನೆನಪಿಲ್ಲಾ. ಸೌಭಾಗ್ಯ ತೀರಿಕೊಂಡ ನಂತರ ವಾರಸು ಪ್ರಕಾರ ಅವರ ಗಂಡ ಗುರುಬಸ್ಸಯ್ಯ ಸೌಭಾಗ್ಯನ ಆಸ್ತಿಗಳಿಗೆ ಮಾಲೀಕರಾಗಿದ್ದರು ಎಂದರೆ ಗೊತ್ತಿಲ್ಲಾ. ಸೌಭಾಗ್ಯಮ್ಮ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಗುರುಬಸ್ಸಯ್ಯನಿಗೆ ಸೌಭಾಗ್ಯಮ್ಮ

ತೀರಿಕೊಂಡ ನಂತರ ದಾವಾ ಆಸ್ತಿಗಳು ಬಂದಿದೆ ಎಂದರೆ ಗೊತ್ತಿಲ್ಲಾ. ದಾವಾ ಐಟಂ ನಂಬರ 3 ಆಸ್ತಿ 42 ಹೆಚ್ ಅರಸಾಪುರದ ಲೇಸಿ ಕಾಳಮ್ಮನಿಗೆ ಸೇರಿದ ಆಸ್ತಿ ಎಂದರೆ ಸರಿ. ಗುರುಬಸ್ಸಯ್ಯ 19.07.2011 ರಂದು ಐಟಂ ನಂಬರ 3 ರ ಆಸ್ತಿಯನ್ನು ಲೇಸಿ ಕಾಳವಮ್ಮನಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 19.07.2011 ರಂದು ಐಟಂ ನಂಬರ 3 ರ ಆಸ್ತಿಯ ಖರೀದಿ ಪತ್ರದ ಮೇಲೆ ಇದುವರೆಗೂ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲಾ ಎಂದರೆ ಸರಿ. ಐಟಂ ನಂಬರ 3 ರ ಆಸ್ತಿ ಚನ್ನವೀರಮ್ಮ ದೇವಿರಮ್ಮ ಮತ್ತು ಸೌಭಾಗ್ಯಮ್ಮನಿಗೆ ಸಂಬಂಧಪಟ್ಟಿಲ್ಲಾ ಎಂದರೆ ಸರಿಯಲ್ಲ. ದಿನಾಂಕ 28.12.2011 ರಂದು ನೋಂದಾದ ವಿಲ್ ಮುಖಾಂತರ ಟಿ ಎಂ ಗುರುಬಸ್ಸಯ್ಯ ಐಟಂ ನಂಬರ 3 ಮತ್ತು ಸರ್ವೆ ನಂಬರ 128 ನ್ನು ಪ್ರತಿವಾದಿಯ ಹೆಸರಿನಲ್ಲಿಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲಾ. ಮನೆ ನಂಬರ 51 ನ್ನು ವಿಲ್ ಮುಖಾಂತರ ಪ್ರತಿವಾದಿಯರಿಗೆ ಗುರುಬಸ್ಸಯ್ಯ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ವಿಲ್ ಮುಖಾಂತರ ಪ್ರತಿವಾದಿಯರೇ ಮಾಲೀಕರಾಗಿ ಸ್ವಾಧೀನಕೂಡ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಪ್ರತಿವಾದಿಯರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಗುರುಬಸ್ಸಯ್ಯ ಸೌಭಾಗ್ಯಮ್ಮ ತೀರಿಕೊಂಡ ನಂತರ ಎಲ್ಲಾ ಕಾರ್ಯಗಳನ್ನು ಪ್ರತಿವಾದಿಯರೇ ಮಾಡಿರುತ್ತಾರೆ ಎಂದರೆ ಇರಬಹುದು. ಗುರುಬಸ್ಸಯ್ಯ ಸೌಭಾಗ್ಯಮ್ಮ ರವರನ್ನು ಪ್ರತಿವಾದಿಯರೇ ನೋಡಿಕೊಂಡಿರುತ್ತಾರೆ ಎಂದರೆ ಸೌಭಾಗ್ಯಮ್ಮ ರವರನ್ನು ನಾವು ನೋಡಿಕೊಂಡಿರುತ್ತೇವೆ. ಸೌಭಾಗ್ಯಮ್ಮ ನನ್ನ ಹೆಸರಿಗೆ ಯಾವುದೇ ವಿಲ್ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಸೌಭಾಗ್ಯಮ್ಮನ ಹೆಸರಿನಲ್ಲಿ ವಿಲ್ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮನಿಗೆ ಪಾರ್ಶ್ವವಾಯು ಆಗಿತ್ತು ಎಂದರೆ ಸರಿ. ಹೀಗಾಗಿ ಯಾವುದೇ

ವಿಚಾರ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರ್ ಎ ಸಿ ಆರ್ 7/2016-17 ನ್ನು ಎಲ್ಲರನ್ನು ಸೇರಿಸದೇ ನಾನು ಎ ಸಿ ನ್ಯಾಯಾಲಯದಲ್ಲಿ ಹೂಡಿದ್ದೆ ಎಂದರೆ ಸರಿ. ಪ್ರತಿವಾದಿಯರನ್ನು ಅದರಲ್ಲಿ ಪಕ್ಷಗಾರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಎ ಸಿ ರವರು ನನ್ನ ಪರವಾಗಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಅಜ್ಜಯ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಹೋಗಿದ್ದರು ಎಂದರೆ ಸರಿ. ಎ ಸಿ ರವರು ಮಾಡಿರುವ ಆದೇಶವನ್ನು ಜಿಲ್ಲಾಧಿಕಾರಿ ರದ್ದು ಮಾಡಿದ್ದಾರೆ ಎಂದರೆ ಸರಿ. ಜಿಲ್ಲಾಧಿಕಾರಿಗಳು ಆದೇಶ ಮಾಡಿದ ನಂತರ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಐಟಂ ನಂಬರ 1, 3, 4 ರ ಮೇಲೆ ನನಗೆ ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.